


### ಫುಟ್‌ಬಾಲ್ ಸಮರ ಸಮಯೋಚಿತ

ವಿಶ್ವದ ಗಮನ ಸೆಳೆದಿರುವ 'ಫುಟ್‌ಬಾಲ್ ವಿಶ್ವ ಸಮರ'ದ ಬಗ್ಗೆ ಮೂಡಿ ಬಂದಿರುವ ಪಿ.ಜಿ. ವಿಜು ಲೇಖನ ಸಮಯೋಚಿತ ಹಾಗೂ ಸ್ತುತ್ಯಾರ್ಹ.

–ನಾ.ವೆ. ಮುರ್ಥಿ, ಕೋಟೇಶ್ವರ ಸೂರ್ಯನಾರಾಯಣರಾವ್, ಜಿ.ಸವಿತಾ, ಬೆಂಗಳೂರು/ ಎಚ್.ಎನ್.ವಿಶ್ವನಾಥ್, ಶಿವಮೊಗ್ಗ

### ಕ್ರಿಕೆಟ್ ಸಪ್ಪೆ ಆಟ!

ಖಲೀಲ್ ಹೇಳಿರುವಂತೆ ಭಾರತದಲ್ಲಿ ಫುಟ್‌ಬಾಲ್ ದಾರಿಯೆಂಬುದೇ ಇಲ್ಲ. ಎಲ್ಲಾ ದಾರಿಗಳನ್ನೂ ಕ್ರಿಕೆಟ್‌ವೊಂದೇ ಆಕ್ರಮಿಸಿಕೊಂಡುಬಿಟ್ಟಿದೆ. ಕಾಲಿನಲ್ಲೇ ರಮ್ಯ ಕಲಾತ್ಮಕತೆ, ಸೊಗಸಾದ ವೇಗ, ಜಿದ್ದಾ ಜಿದ್ದಿ ಸೆಣಸಾಟ, ರೋಮಾಂಚಕತೆ– ಇವೆಲ್ಲವನ್ನೂ ಕೇವಲ ಒಂದೂವರೆ ಗಂಟೆಯಲ್ಲಿ ನೀಡುವ ಫುಟ್‌ಬಾಲ್ ಆಟಕ್ಕೆ ಹೋಲಿಸಿದರೆ ಸೋಮಾರಿಗಳ ಆಟ ಕ್ರಿಕೆಟ್ ಬರೀ ಸಪ್ಪೆ!

–ಪ್ರವೀಣ್ ಎಸ್.ಶೆಟ್ಟಿ, ಮಂಗಳೂರು

### ರೋಚಕ ಸೈಕ್ಲಿಸ್ಟ್

ಸುಭಾಷ್‌ಚಂದ್ರ ಪರಿಚಯಿಸಿರುವ 'ಅಮೆರಿಕಾದಲ್ಲಿ ಬೆಂಗಳೂರಿನ ಸೈಕ್ಲಿಸ್ಟ್'ನ ಕಥೆ ರೋಚಕವಾಗಿದೆ.

–ನೆ.ಲ.ರಾಂ, ಬೆಂಗಳೂರು

### ಹಿತಕರ ರೈಲು ಪ್ರವಾಸ

ಈ ರೈಲಿಗೆ ಎಂಜಿನ್ನೂ ಇಲ್ಲ, ಚಕ್ರಗಳೂ ಇಲ್ಲ! ಮಂಜುಳಾರಾಜ್ ನಾವು ಪ್ರವಾಸ ಮಾಡಿದ ಹಾಗೆ ಲೇಖನ ಕಟ್ಟಿಕೊಟ್ಟಿದ್ದಾರೆ.

–ಎಚ್. ಆನಂದ್‌ಕುಮಾರ್, ಚಿತ್ರದುರ್ಗ

### 'ಹೊಲಸು!'

'ಸಿಡ್ನಿಯ ಆ ಯುದ್ಧ ಸ್ಮಾರಕ' (ಬಿ.ವಿ. ಸುಭದ್ರಾ). ಕುವೆಂಪು ಅವರ 'ಶ್ಮಶಾನ ಕುರುಕ್ಷೇತ್ರ' ನಾಟಕದ ಕಡೆಯಲ್ಲಿ ಭೀಮ ಉದ್ಗರಿಸುತ್ತಾನೆ: 'ಕಡೆಗುಂ ಪೊಲಸಾದುದೀ ಭಾರತ ಸಂಗ್ರಾಮಂ!' ಹಾಗೆ ನೋಡಿದರೆ, ಎಲ್ಲ ಸಂಗ್ರಾಮಗಳೂ ಹೊಲಸೇ! ಒಂದೆರಡೆ ಯುದ್ಧ ದುರಂತಗಳು! (ಓ ಪೊಲ್ಲ ಯುದ್ಧಮೇ, ಎಂದು ನಿಲ್‌ವೈ?')

–ಸಿಪಿಕೆ, ಮೈಸೂರು

### ಕಾರ್ಪ್ ಅಲ್ಲ, ಕೋರ್

ಸಿಡ್ನಿಯ ಆ ಯುದ್ಧ ಸ್ಮಾರಕದಲ್ಲಿ ಲೇಖಕರು ಬಳಸಿರುವ ಆರ್ಮಿ 'ಕಾರ್ಪ್' ಪದಬಳಕೆ ತಪ್ಪು. ಅದು ಕಾರ್ಪ್ ಅಲ್ಲ ಕೋರ್ ಎಂದಿರಬೇಕಿತ್ತು.

–ಡಿ.ಕೆ.ರವಿ, ಬೆಂಗಳೂರು

### ಪ್ರಬುದ್ಧ, ವಿಡಂಬನಾತ್ಮಕ ಕಥೆ

ಕೇಶವರೆಡ್ಡಿ ಹಂದ್ರಾಳರ ಎಂ.ಎಲ್.ಎ. ಸಾಹೇಬರೂ, ಲಾಳದ ಮೊಳೆಯೂ... ಕಥೆ ಪ್ರಬುದ್ಧವಾಗಿದೆ. ಒಕ್ಕಲುತನದ ಮೂಲ ತಾಂತ್ರಿಕತೆಗಳು ಮೂಲೆ ಗುಂಪಾಗಿ ನೇಪಥ್ಯ ಸೇರುತ್ತವೆ ಎಂಬುದು ಕಟುವಾಸ್ತವ. ಪ್ರಜಾಪ್ರಭುತ್ವದ ರಾಜಕಾರಣದಲ್ಲಿ ಮತ್ತೆ ಗಿಮಿಕ್‌ಗಳದೇ ರಾಜ್ಯಭಾರವಾಗಿ ಪ್ರಜೆಗಳಿಗೆ ರಾಗಿ ಬೀಸುವುದು ತಪ್ಪುವುದೇ ಇಲ್ಲ ಎನ್ನುವುದನ್ನು ಕಥೆಗಾರರು ವಿಡಂಬನಾತ್ಮಕವಾಗಿ ವಿವರಿಸಿದ್ದಾರೆ.

–ತಂ. ರಾಮು, ಹರಪನಹಳ್ಳಿ/ಎಂ.ಎಲ್. ಲಕ್ಷ್ಮಣ ರಾವ್, ದಾವಣಗೆರೆ/ ಕೊಹಿಮ, ಬಸರಕೋಡು/ ನೆ.ಸು.ಆನಂದ್, ಬೆಂಗಳೂರು/ ರಾಜಶೇಖರಗೌಡ, ಕೊಟ್ಟೂರು/ ಸಿ.ರಮೇಶ್, ಕೆ.ಆರ್.ನಗರ

### ಮೊಬೈಲ್ ವಿಪರೀತ ಬಳಕೆ ಬೇಡ

'ಮಧುರ ಜೇನಿನ ಸುತ್ತ' ನಾಗರಾಜ ಹೆಗಡೆ ಅವರ ಲೇಖನ ಸೊಗಸಾಗಿತ್ತು. ಇದೀಗ ಹೊರಬಿದ್ದಿರುವ ಮೊಬೈಲ್ ಫೋನ್ ಮತ್ತು ಟವರ್‌ಗಳಿಂದ ಜೇನಿನ ದಟ್ಟಣೆ ದೂರವಾಗುತ್ತಿದೆ. ಈಗಾಗಲೇ ಗುಬ್ಬಿಗಳು ಈ ಸೂಕ್ಷ್ಮ ತರಂಗಗಳ ಆಘಾತಕ್ಕೆ ಸಿಕ್ಕು ನಿಧಾನಕ್ಕೆ ಮರೆಗೆ ಸರಿದಿವೆ. ವಿಮಾನ ಧರೆಗಿಳಿಯುವ ಮೊದಲೇ ಮೊಳಗಿದ ಮೊಬೈಲ್ ತರಂಗಗಳು ಪೈಲಟ್‌ನ ಸಂಪರ್ಕ ತಪ್ಪಿಸಿ ಮಂಗಳೂರಿನಲ್ಲಿ ವಿಮಾನ ಅಪಘಾತಕ್ಕೂ ಕಾರಣವಾಗಿತ್ತು ಎನ್ನುವ ವರದಿಯೂ ಮೊಬೈಲ್ ಮಹಾತ್ಮೆಯನ್ನೇ ಸಾರುತ್ತಿದೆ. ಜೇನುಹುಳಗಳು ಎಲ್ಲಿರುತ್ತವೆಯೋ ಅಲ್ಲಿ ಸಮೃದ್ಧಿಯಿರುತ್ತದೆ ಎನ್ನುವ ಸತ್ಯ ಇನ್ನಾದರೂ ನಮಗೆ ಅರಿವಾಗಬೇಕಿದೆ. ಮೊಬೈಲ್‌ಗಳ ವಿಪರೀತ ಬಳಕೆ ನಿಲ್ಲಬೇಕಿದೆ.

–ಬೇದ್ರೆ ಮಂಜುನಾಥ, ಚಿತ್ರದುರ್ಗ/ ಕಾಳೀಹುಂಡಿ ಶಿವಕುಮಾರ್, ಮೈಸೂರು

### ಮೈಜುಂ ಎನಿಸಿದ ಹುಲಿ

ಪಟ್ಟಾಯ ಹುಲಿಧಾಮದ ಕುರಿತು ಚಿದಂಬರ ಬೈಕಂಪಾಡಿ ಲೇಖನ ಓದಿದಾಗ ಮೈಜುಂ ಅಂದಿತು.

–ಡಿ.ಎಸ್. ಪಂಕಜ ಸುಬ್ರಮಣ್ಯಂ, ಬೆಂಗಳೂರು

### ಹೊಯ್ಸಳರ ಕಲಾಪ್ರೇಮ

ಶ್ರೀವತ್ಸ ಎಸ್. ವಟಿಯವರ ಕಾಷ್ಠದಲ್ಲಿ ಹೊಯ್ಸಳ ಕಲೆ ಲೇಖನ ಹೊಯ್ಸಳ ಕಾಲದ ರಾಜರು ಕಲೆ, ಸಂಸ್ಕೃತಿಗೆ ಎಷ್ಟು ಮಹತ್ವ ನೀಡುತ್ತಿದ್ದರು ಎಂಬುದನ್ನು ತಿಳಿಸಿಕೊಟ್ಟಿದೆ.

–ನಾಗರಾಜ ಬಣಕಾರ್, ಕೊಟ್ಟೂರು/ ಎಸ್.ಪ್ರಕಾಶ್, ದೇವನಹಳ್ಳಿ

### ನಾಟಕ ಡಿಪ್ಲೊಮಾಕ್ಕೆ ಅರ್ಜಿ ಆಹ್ವಾನ

ಕನ್ನಡ ವಿಶ್ವವಿದ್ಯಾಲಯ, ಹಂಪಿ ಮಾನ್ಯತೆ ಪಡೆದಿರುವ ಕುಂದಾಪುರದ ರಂಗ ಅಧ್ಯಯನ ಕೇಂದ್ರವು 2010–11ರ ಸಾಲಿನ ಒಂದು ವರ್ಷದ ನಾಟಕ ಡಿಪ್ಲೊಮಾ ಕೋರ್ಸ್‌ಗೆ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಆಯ್ಕೆಯಾದವರಿಗೆ ಊಟ ಮತ್ತು ವಸತಿ ಸೌಲಭ್ಯ ಒದಗಿಸಲಾಗುವುದು. ಕನಿಷ್ಠ ಅರ್ಹತೆ ಎಸ್‌ಎಸ್‌ಎಲ್‌ಸಿ. ರಂಗಭೂಮಿಯಲ್ಲಿ ವಿಶೇಷ ಹಿನ್ನಲೆ ಹೊಂದಿರುವವರಿಗೆ ಮೊದಲ ಆದ್ಯತೆ. ನಿರ್ದೇಶಕರು, ರಂಗ ಅಧ್ಯಯನ ಕೇಂದ್ರ, ಭಂಡಾರ್ಕರ್ಸ್ ಕಾಲೇಜು ವಠಾರ, ಕುಂದಾಪುರ–576201 ಉಡುಪಿ ಜಿಲ್ಲೆ– ಈ ವಿಳಾಸಕ್ಕೆ ರೂ. 100 ಡಿ.ಡಿ. ಸಲ್ಲಿಸಿ ಅರ್ಜಿ ಪಡೆಯಬಹುದು.

ಕೊನೆಯ ದಿನ ಜುಲೈ 12. ಕೇಂದ್ರದ ಆವರಣದಲ್ಲಿ ಜುಲೈ 21 ರಂದು ನಡೆಯುವ ಸಂದರ್ಶನಕ್ಕೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗಬೇಕು. ಹೆಚ್ಚಿನ ವಿವರಗಳಿಗೆ 08254–230369 ಅಥವಾ 9449105052 ಸಂಪರ್ಕಿಸಬಹುದು.

### ಬೇಂದ್ರೆ ಟ್ರಸ್ಟ್‌ನಿಂದ ಪುಸ್ತಕ ಆಹ್ವಾನ

ಧಾರವಾಡದ ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್ 40 ವರ್ಷದೊಳಗಿನ ಯುವ ಲೇಖಕ–ಲೇಖಕಿಯರಿಂದ 2009 ರಲ್ಲಿ ಪ್ರಕಟವಾದ ಪುಸ್ತಕಗಳನ್ನು ಆಹ್ವಾನಿಸಿದೆ. 1969ರ ನಂತರ ಜನಿಸಿದ ಲೇಖಕರು ಇದಕ್ಕೆ ಅರ್ಹರಿದ್ದು, ತಮ್ಮ ಒಂದು ಪುಸ್ತಕದ 3 ಪ್ರತಿಗಳನ್ನು ಜನನ ಪ್ರಮಾಣ ಪತ್ರ ಸಮೇತ ಜೂನ್ 30 ರೊಳಗಾಗಿ ಅಧ್ಯಕ್ಷರು, ಡಾ. ದ.ರಾ. ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ್, ಬೇಂದ್ರೆ ಭವನ, ಸಾಧನಕೇರಿ, ಧಾರವಾಡ–8ಕ್ಕೆ ತಲುಪುವಂತೆ ಕಳಿಸಲು ಕೋರಿದೆ.

ಹೆಚ್ಚಿನ ವಿವರಕ್ಕೆ ಸಂಪರ್ಕಿಸಿ: ಶ್ಯಾಮಸುಂದರ ಬಿದರಕುಂದಿ, ಫೋನ್: 0836–2435327

